# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಕ್ಷಿಣ ವಲಯ

**ಬೈರಸಂದ್ರ , ವಾರ್ಡ ಸಂಖ್ಯೆ: 169**

**ದಿನಾಂಕ:15.01.2022 ರಂದು ವಾರ್ಡ ಸಂಖ್ಯೆ 169 ಬೈರಸಂದ್ರ ವಾರ್ಡನಲ್ಲಿ ನಡೆದ ವಾರ್ಡ ಸಮಿತಿ ಸಭೆ:**

## –: ಸಮಿತಿ ಸಭೆಯ ನಡವಳಿಗಳು :–

ವಾರ್ಡ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಮತ್ತು ವಾರ್ಡ ಸಮಿತಿ ಸದಸ್ಯರು:–

| ಕ್ರಮ ಸಂಖ್ಯೆ | ಹೆಸರು | ಹುದ್ದೆ |
|---|---|---|
| 01 | ಶ್ರೀ ವಾಲೂ ರಾಥೋಡ್ | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| 02 | ಶ್ರೀ ಚಂದ್ರಶೇಖರ್ ವಿ | ಕಾರ್ಯದರ್ಶಿ ಮತ್ತು ಸಂಚಾಲಕರು |
| 03 | ಶ್ರೀ ನರೇಂದ್ರ ಬಾಬು | ಅರಣ್ಯ ಇಲಾಖೆ (ದಕ್ಷಿಣ) , ಬಿ.ಬಿ.ಎಂ.ಪಿ |
| 04 | ಕುಮಾರಿ ಪೂನಂ | ಹಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ |
| 05 | ಶ್ರೀ ರಮೇಶ್ ವಿ ಬಿ | ಕಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ |
| 06 | ಶ್ರೀಮತಿ ಲಕ್ಷ್ಮೀ | ಬೈರಸಂದ್ರ ಮಹಿಳಾ ಸಂಘದ ಅದ್ಯಕ್ಷರು |
| 07 | ಶ್ರೀ ಮೋಹನ್ ರಾವ್. ಇ | ಎಲ್.ಐ.ಸಿ ಕಾಲೋನಿ ನಿವಾಸಿಗಳ ಸಂಘ |
| 08 | ಶ್ರೀ ಶ್ರೀನಿವಾಸನ್ | ಎಲ್.ಐ.ಸಿ ಕಾಲೋನಿ ನಿವಾಸಿಗಳ ಸಂಘ |
| 09 | ಶ್ರೀ ಮಂಜುನಾಥ್ ಜಿ ಎನ್ | ಎಲ್.ಐ.ಸಿ ಕಾಲೋನಿ ನಿವಾಸಿಗಳ ಸಂಘ |

ವಾರ್ಡ ಸಮಿತಿ ಅದ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತ ಕೋರುತ್ತಾ , ಸಭೆಯನ್ನು ಪ್ರಾರಂಭಿಸಿದರು.

1. ಮಾನ್ಯ ನೋಡಲ್ ಅಧಿಕಾರಿಗಳು ಮಾತನಾಡುತ್ತಾ 29.12.2021 ರಂದು ತಿಳಿಸಿದ ಸಾರ್ವಜನಿಕರು ಮತ್ತು ನೌಕರರು ತಿಳಿಸಿದ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

2. ವಾರ್ಡ ಸಂಖ್ಯೆ 169 ರಲ್ಲಿರುವ ಅನೇಕ ಪಾರ್ಕ್‌ನಲ್ಲಿ ಸೊಳ್ಳೆಗಳು ತುಂಬಾ ಹೆಚ್ಚಾಗಿದ್ದು , ಪಾರ್ಕ್‌ಗಳಲ್ಲಿನ ಸೊಳ್ಳೆಗಳನ್ನು ನಿಯಂತ್ರಿಸಲು ಸೊಳ್ಳೆ ಔಷದಿಯನ್ನು ಸಿಂಪಡಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಆರೋಗ್ಯಾಧಿಕಾರಿಗಳು, ಬಿ.ಬಿ.ಎಂ.ಪಿ ಜಯನಗರ)**

3. ಬೈರಸಂದ್ರ ಮುಖ್ಯರಸ್ತೆ ಯಲ್ಲಿರುವ ಅನೇಕ ಮ್ಯಾನ್‌ಹೋಲ್ (Manhole) ಗಳಲ್ಲಿ ಹೊಳು ತುಂಬಿಕೊಂಡಿದ್ದು, ಮ್ಯಾನ್‌ಹೋಲ್‌ಗಳಲ್ಲಿರುವ ಹೂಳುನ್ನು ತೆಗೆಯಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, BWSSB, ಜಯನಗರ)**

4. ಕೆನರಾ ಬ್ಯಾಂಕ್ ಕಾಲೋನಿನಲ್ಲಿರುವ ಮರದಲ್ಲಿನ ಒಣಗಿದ ಕೊಂಬೆಗಳು ಬೀಳುವ ಸ್ಥಿತಿಯಲ್ಲಿದ್ದು, ಅಂತಹ ಕೊಂಬೆಗಳನ್ನು ಕತ್ತರಿಸಿ ತೆಗೆಯುವಂತೆ ಸಭೆಯಲ್ಲಿ ಕೋರಿದರು. **(ಅರಣ್ಯ ಇಲಾಖೆ (ದಕ್ಷಿಣ) ಬಿ.ಬಿ.ಎಂ.ಪಿ ಜಯನಗರ)**

Scanned with CamScanner

5. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI) ಬೈರಸಂದ್ರದ ರಸ್ತೆಯಲ್ಲಿ ವಾಹನಗಳು ವೇಗವಾಗಿ ಚಲಿಸುತ್ತಿದ್ದು ಅಪಘಾತ ಸಂಭವಿಸುವ ಸಾಧ್ಯತೆಯಿದ್ದು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾನ ಎದುರುಗಡೆ Hump ನ್ನು ನಿರ್ಮಿಸಲು ಸಭೆಯಲ್ಲಿ ಕೋರಿದರು. (Traffic Enginnering Cell BBMP)

6. LIC ಕಾಲೋನಿನಲ್ಲಿರುವ ಅನೇಕ ಕಡೆ ಬ್ಲಾಕ್‌ಸ್ಪಾಟ್ ಹೆಚ್ಚಾಗುತ್ತಿದ್ದು, (Black Spot) ಇದನ್ನು ತಡೆಗಟ್ಟಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಈಗಿರುವ ಬ್ಲಾಕ್‌ಸ್ಪಾಟ್‌ಗಳನ್ನು ತೆರವುಗೊಳಿಸಬೇಕೆಂದು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, SWM, ಜಯನಗರ)**

7. ಬೈರಸಂದ್ರ ವ್ಯಾಪ್ತಿಯಲ್ಲಿ ಒಣ ಮತ್ತು ಹಸಿ ಕಸ ಸಂಗ್ರಹಣೆ ಸರಿಯಾದ ಕ್ರಮದಲ್ಲಿ ಸಮರ್ಪಕವಾಗಿ ಸಂಗ್ರಹಣೆಯಾಗುತ್ತಿರುವುದಿಲ್ಲ. ಸದರಿ ಸಮಸ್ಯೆಯನ್ನು ಬಗ್ಗೆ ಹರಿಸಲು ಸಭೆಯಲ್ಲಿ ಕೋರಿದರು. **(ಕ್ರಮ: ಸ.ಕಾ.ನಿ.ಅ, SWM, ಜಯನಗರ)**

**ನಿರ್ಣಯ:** ಈ ವಿಷಯಕ್ಕೆ ಸಮಿತಿಯು ಒಪ್ಪಿಗೆ ತಿಳಿಸಿರುತ್ತಾರೆ. ಕೊನೆಯದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಕಾರ್ಯದರ್ಶಿ ಮತ್ತು ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

V. Lova

(ಶ್ರೀ ಚಂದ್ರಶೇಖರ್. ವಿ)
ಕಾರ್ಯದರ್ಶಿ ಮತ್ತು ಸಂಚಾಲಕರು
ವಾರ್ಡ್ ಸಮಿತಿ ಸಭೆ
ವಾರ್ಡ–169, ಬೈರಸಂದ್ರ

Scanned with CamScanner